

ಮೈಸೂರ್ ಕಡೆ ಲಾವ್ಣೆರು ಊಗುಡ್ತ ಕೇಳ್ಕೆಂಡ್ ಕೂತಿದ್ರು. ಇನ್ ಬೆಳ್ಕರುದ್ರೆ ಸಾಬ್ರ ಹಬ್ಬ. ಎಲ್ಲ ಓಡಾಡ್ಕೆಂಡು ವೊತ್ತಿಮುಂಚೆ ಮಸೂತಿತಕೋಗಿ ಬಂದು ಉಂಡು ತಿರ್ಗಾಡಿರು. ಸರಿ ರಾತ್ರಿ ಒಂಬತ್ತು ಗಂಟೆಗೆ ಲಾವ್ಣಿರು ಐದ್ರಾಲಿಯಿಂದ ಶುರುಮಾಡಿ ಟಿಪ್ಪು ಸುಲ್ತಾನ್ತಕೆ ಬರೊ ಹೊತ್ತಿಗೆ ಅರ್ಧ ಹೊತ್ತು. 'ಅಪ್ಪನ ಕತ್ತಿ ಹಿಡಿದು, ಬಿಳಿಯರನು ಸದೆ ಬಡಿದು, ಮೀಸೆಯ ತಿರುವುತ್ತಾನೆ, ಕೆಂಡಾವ ಉಗುಳುತ್ತಾನೆ' ಎನ್ನುವುದೂ ಒಂದೇ ಆಗ ಗಂಗಮ್ಮುಂಗು ಹೆರಿಗೆ ನೋವು ಕಾಣಿಸ್ಕೆಣ. ಅಷ್ಟೊತ್ನಲ್ಲಿ ಯಾವ ಡಾಕ್ಟ್ರು, ಯಾವ ಹಾಸ್ಪೆಟ್ಲು ಒಂದೂ ಕಾಣ್ದು. ಗಂಡುಸ್ರೆಲ್ಲ ಪರ್ದಾಡ್ಬೇಕಾದ್ರೆ ಲಾವ್ಣಿ ಮಾಡ್ತಿದ್ದ ಹಿರೀಕಿ ಯಲ್ಲಮ್ಮ, ತನ್ನ ಸಹವರ್ತಿಗಳಿಗೆ ಮುಂದುವರೆಸಲು ಹೇಳಿ ದುರ್ಗಯ್ಯನ ಮನಿಗೆ